**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿಸಿ ನಂ. 1957/2020**

| | | | |
|---|---|---|---|
| **ಹೆಸರು** | **:** | **ಡಾ. ವಿಜಯಕುಮಾರ** | ಚಾ.ಸಾ. 8 |
| **ತಂದೆಯ ಹೆಸರು** | **:** | **ಶಿವಶರಣಪ್ಪ** | ಪ್ರಾ.ಸಾ. 8 |
| **ವಯಸ್ಸು** | **:** | **35 ವರ್ಷ** | ದಿನಾಂಕಃ 29-11-2025 |
| **ಉದ್ಯೋಗ** | **:** | **PG ವಿದ್ಯಾರ್ಥಿ** | |
| **ವಾಸಸ್ಥಳ** | **:** | **ಗುಲಬರ್ಗಾ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ದಿನಾಂಕಃ 06-09-2018 ರಿಂದ 23-05-2023 ರವರೆಗೆ ಸರಕಾರಿ ಆಸ್ಪತ್ರೆ ಸುಲೇಪೇಟನಲ್ಲಿ ವೈದ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕಃ 21-09-2020 ರಂದು ಸಾಯಂಕಾಲ 08-20 ಗಂಟೆಗೆ ಚಾಸಾ-1 ರವರು ತಮ್ಮ ತಾಯಿಯೊಂದಿಗೆ ಹಲ್ಲೆಯ ಹಿನ್ನೆಲೆಯಲ್ಲಿ ನಮ್ಮ ಆಸ್ಪತ್ರೆಗೆ ಬಂದಿದ್ದು ಅವರಿಗೆ ತಪಾಸಣೆ ಮಾಡಿ ನೋಡಿದಾಗ ಅವರ ಮೊಳಕಾಲು 2x1 ಸೆ.ಮೀ. ಉಳ್ಳ ಹರಿತ ಗಾಯ, ಅವರ ತಲೆಯ ಭಾಗಕ್ಕೆ 5x2x1 ಸೆ.ಮೀ. ಉಳ್ಳ ಹರಿತ ಗಾಯ ಕಂಡುಬಂದಿರುತ್ತದೆ. ಅವರು ತಮ್ಮ ಬೆನ್ನಿಗೆ ನೋವುಗಳಾಗಿರುವ ಬಗ್ಗೆ ತಿಳಿಸಿರುತ್ತಾರೆ. ಅವರು ತಮಗೆ ಪ್ರಜ್ಞೆ ತಪ್ಪಿರುವ ಬಗ್ಗೆ ಹಾಗೂ ಮೂಗಿನಿಂದ ರಕ್ತ ಬಂದಿರುವ ಬಗ್ಗೆ ಹೇಳಿರುತ್ತಾರೆ. ಚಾಸಾ-1ರವರಿಗೆ ಹೆಚ್ಚಿನ ಚಿಕಿತ್ಸೆಗಾಗಿ ಹೋಗಲು ಹೇಳಿದ್ದು ಆದರೆ ಅವರು ಹೋಗಿರುವುದಿಲ್ಲ. ಮೇಲೆ ಹೇಳಿರುವ ಗಾಯಗಳು ತಾಜಾ ಗಾಯಗಳಾಗಿದ್ದು ಸಾಮಾನ್ಯ ಸ್ವರೂಪದ ಗಾಯಗಳಾಗಿವೆ. ಅದರಂತೆ ನಾನು ಈಗ ನೋಡುತ್ತಿರುವ ನಿಪಿ-7ರ ಗಾಯದ ಪ್ರಮಾಣ ಪತ್ರ ನೀಡಿದ್ದೇನೆ ಮತ್ತು ಅದರಲ್ಲಿರುವ ಸಹಿ ನನ್ನದೆ. ನನ್ನ ಸಹಿಯನ್ನು ನಿಪಿ-7(ಬಿ) ಎಂದು ಗುರುತಿಸಲಾಯಿತು. ಸಾಮಾನ್ಯವಾಗಿ ಯಾವುದೇ ಒಂದು ಗಟ್ಟಿ ವಸ್ತುವಿನಿಂದ ಹೊಡೆದಾಗ ನಿಪಿ-7 ರ ಗಾಯ ಆಗಬಹುದು.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಬಿ.ಎಸ್. ವಕೀಲರಿಂದಃ-**

ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಸಿಸಿ ರಸ್ತೆ ಮೇಲೆ ಬಿದ್ದಾಗ ನಾನು ಹೇಳಿರುವ ಗಾಯಗಳು ಆಗಬಹುದು ಎಂದರೆ ಸರಿ.

**ಮರುವಿಚಾರಣೆಃ ಇಲ್ಲಾ .**

**(ತೆರೆದ  ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**